ಇರಬೇಕಾಗುತ್ತದೆ. ಅಷ್ಟಕ್ಕೂ ಮೂಲತಃ ಅಸಂಗತವಾದ ಈ ವಿಶ್ವದಲ್ಲಿ ಸೇಂಟ್ ಪೀಟರ್‌ನ ಮರೆವಿನಿಂದ ನಾವು ಸ್ವರ್ಗ ಅಥವಾ ನರಕಕ್ಕೆ ಹೋಗುತ್ತೇವೆಯೇ ಹೊರತು ನಮ್ಮ ಕರ್ಮಗಳ ಫಲದಿಂದಾಗಿ ಅಲ್ಲ. ಅಥವಾ ಹೋಗಲಿ ಬಿಡಿ ಅದು ನಮಗೆ ಗೊತ್ತಿಲ್ಲ ಎನ್ನುತ್ತದೆ ಈ ಪದ್ಯ. ಇನ್ನೊಂದು ಪದ್ಯದಲ್ಲಿ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್‌ರ ಪ್ರಸಿದ್ಧ ಮಾತು 'God does not play at dice', ಅಂದರೆ ದೇವರು ಜೂಜು ಆಡುವುದಿಲ್ಲ ಎನ್ನುವುದು ಪ್ರಸ್ತಾಪವಾಗುತ್ತದೆ. ವಿಶ್ವದ ಎಲ್ಲಾ ವಿದ್ಯಮಾನಗಳ ಹಿಂದೆ ನಿಯಮಗಳಿವೆಯೆ, ಉದ್ದೇಶಗಾರಿಕೆ ಇದೆಯೇ ಎನ್ನುವುದರ ಬಗ್ಗೆ ಗಾಢವಾಗಿ ಚಿಂತಿಸಿದ ಈ ಮಹಾವಿಜ್ಞಾನಿ ಈ ಮಾತನ್ನು ಹೇಳಿದ್ದು ಜೂಜಿನಲ್ಲಿ ಇರುವ chanciness, ಅನಿರೀಕ್ಷಿತಗಳು ಈ ವಿಶ್ವದ ರಚನೆಯಲ್ಲಿ ಇಲ್ಲ ಎನ್ನುವ ಅರ್ಥದಲ್ಲಿ. ಇದಕ್ಕೆ ಅಸ್ತಿತ್ವವಾದಿ ತಿರುಮಲೇಶ್‌ರ ಟಿಪ್ಪಣಿಯೆಂದರೆ, ದೇವರು ಹಾಗೂ ಮನುಷ್ಯ ಇಬ್ಬರೂ ಜೂಜು ಆಡುತ್ತಾರೆ. ಕೆಲವೊಮ್ಮೆ ಜೊತೆಯಾಗಿ, ಕೆಲವೊಮ್ಮೆ ಪರಸ್ಪರ ವಿರುದ್ಧವಾಗಿ.

ಹೀಗೆ ಈ ಪದ್ಯಗಳ ಹಿಂದೆ ಬಹು ಗಂಭೀರವಾದ ಹುಡುಕಾಟವಿದೆ. ಇಡೀ ಕವನ ಸಂಕಲನವು ಬದುಕಿನ ಬಗ್ಗೆ ಅಗಾಧವಾದ ಚಿಂತನೆಯಾಗಿದೆ. ಅಲ್ಲದೆ ಸ್ವಂತದ ಬದುಕಿನ ಅವಲೋಕನವಾಗಿದೆ. ಪರೀಕ್ಷೆ ಆಗಿದೆ. ಬದುಕಿಗೆ ಉದ್ದೇಶವಿದೆಯೆ? ಅರ್ಥವಂತಿಕೆ ಇದೆಯೆ? ಅಥವಾ ನಮ್ಮ ಅಹಂ ಅನ್ನು ಮೀರಿ ನೋಡಿದರೆ ಇಂಥ ಪ್ರಶ್ನೆಗಳನ್ನು ಕೇಳುವ ಕೂವತ್ತು ನಮಗಿಲ್ಲ ಎನ್ನುವ ತಿಳಿವಳಿಕೆ ಈ ಪದ್ಯಗಳಲ್ಲಿದೆ. ವಿಷಾದ ಮತ್ತು ವಿಜೃಂಭಣೆ ಇವೆರಡನ್ನೂ ಬದಿಗಿಟ್ಟು ಇದರ ಬಗ್ಗೆ ಕವಿ ಚಿಂತಿಸುತ್ತಾರೆ. (Meditate ಎನ್ನುವ ಅರ್ಥದಲ್ಲಿ), ಜರ್ಮನ್ ತತ್ವಜ್ಞಾನಿ ನೀಶೆ ತನ್ನ ಕೃತಿ 'Thus Spake Zarathustra'ನಲ್ಲಿ 'ಈ ಲೋಕವು ಮೊದಲೂ ಇತ್ತು, ಮುಂದೆಯೂ ಇರುತ್ತದೆ' ಎಂದು ಮುಕ್ತಾಯಕ್ಕೆ ಬರುತ್ತಾನೆ ಎಂದು ಇನ್ನೊಂದು ಪದ್ಯದಲ್ಲಿ ಅವರು ನೆನಪಿಸಿಕೊಳ್ಳುತ್ತಾರೆ. ಅದೇ ತತ್ವಜ್ಞಾನಿಯ ಇನ್ನೊಂದು ಮಾತು ಮತ್ತೊಂದು ಪದ್ಯದ ವಸ್ತುವೂ ಆಗಿದೆ. ಅದೇನೆಂದರೆ, 'ವ್ಯಾಕರಣವು ಇರುವವರೆಗೆ ನೀವು ದೇವರನ್ನು ಏನೂ ಮಾಡಲಾರಿರಿ' ಎಂದು. ಮನುಷ್ಯ ಪ್ರಜ್ಞೆ, ಭಾಷೆಯ ರಚನೆ ಹಾಗೂ ದೇವರ ಅಸ್ತಿತ್ವಗಳ ಸಂಬಂಧದ ಬಗೆಗಿನ ಈ ಚಮತ್ಕಾರದ ಮಾತು ಕವಿಯ ಧ್ಯಾನದ ವಸ್ತುವಾಗುತ್ತದೆ. ದೇವರು ಒಂದು ಭಾಷಿಕವಾದ ಭ್ರಮೆಯೇ ಇರಬಹುದೆ ಎನ್ನುವ ಪ್ರಶ್ನೆ ಕಾಡುತ್ತಿರುವಾಗಲೇ, ಅನಂತಮೂರ್ತಿ 'ಭ್ರಮೆಯೇ ಇಲ್ಲದಿದ್ದರೆ ಬದುಕೂ ಇಲ್ಲ' ಎಂದು ಹೇಳಿದ್ದು ನೆನಪಾಗುತ್ತದೆ. ಅಂದಹಾಗೆ, ಈ ಸಂಕಲನದ ಎರಡು ಪದ್ಯಗಳು ಎ.ಕೆ. ರಾಮಾನುಜನ್ ಮತ್ತು ಯು.ಆರ್. ಅನಂತಮೂರ್ತಿಯವರ ಬಗೆಗಿನ ದೀರ್ಘವಾದ elegyಗಳಾಗಿವೆ. elegy ಎಂದರೆ ಶೋಕ ಕಾವ್ಯವಲ್ಲ. ಹೊರಟು ಹೋದವರ ನೆಪದಲ್ಲಿ ಬದುಕಿರುವವರು ಬದುಕಿನ ಬಗ್ಗೆ ಮಾಡುವ ಚಿಂತನೆ. ಆ ಅರ್ಥದಲ್ಲಿ ಈ ಕವನಗಳಲ್ಲಿ ಅವರಿಬ್ಬರೂ ಸಂಕೀರ್ಣವಾದ ಸಂಕೇತಗಳಾಗಿ ಬರುತ್ತಾರೆ. ಈ ಸಂಕಲನದ ಹಿಂದಿರುವ ಕಾವ್ಯಪ್ರಜ್ಞೆ ರಾಮಾನುಜನ್‌ರ ಕಾವ್ಯಪ್ರಜ್ಞೆಗೆ ಮತ್ತು ಲೋಕದೃಷ್ಟಿಗೆ ಹತ್ತಿರವಾಗಿರುವಂಥದು. ಅದೇ ಅನೌಪಚಾರಿಕತೆ ಅದೇ ಮಹತ್ತರವಾದ ತಿಳಿವಳಿಕೆಯನ್ನು ಹಗುರವಾಗಿ ಹೇಳುವ ಶೈಲಿ ಇಲ್ಲಿದೆ.

ವಯಸ್ಸು ಮತ್ತು ಬರಬಹುದಾದ ಸಾವು ಇವೆರಡೂ ಈ ಪದ್ಯಗಳ ಒಳಗೆ ಇಣುಕುತ್ತಿವೆ.

ಒಬ್ಬೊಬ್ಬರಾಗಿ ಮರೆಯಾಗಿದ್ದಾರೆ
ನನ್ನ ಇಂದು ನಿನ್ನಿನ ದೇವತೆಗಳು

ಇದು ಗೊತ್ತಾಗಿರುವ ಸತ್ಯವಾಗಿದೆ.

ದೇವತೆಗಳು ಬಂದು ಕರೆಯುವರೆ ನನ್ನ
ಅಥವಾ ಸೈತಾನ ಬಂದು ಎಳೆಯುವನೆ ಗೊತ್ತಿಲ್ಲ...

ಇಷ್ಟು ವರ್ಷಗಳ ಮೇಲೆ ನನಗೆ ಎರಡೂ ಒಂದೆ...

ಎನ್ನುವ ನಿಲುವು ಕವಿಯದಾಗಿದೆ. ಹೀಗೆ ಅನೇಕ ಪದ್ಯಗಳ ಹಿಂದೆ ಒಂದು autumnal ಎನ್ನಬಹುದಾದ ಮನೋಭಾವವಿದೆ. ಇದನ್ನು ಮಾಗಿದ ಎಂದು ಕರೆಯುವುದೂ ಸರಿಯಲ್ಲ. ಏಕೆಂದರೆ ಮಾಗುವುದರ ಬಗ್ಗೆ ಕವಿಗೆ ನಂಬಿಕೆ ಇಲ್ಲ. ನಮ್ಮ ಖಾಸಗಿ ವಿಹ್ವಲತೆಗಳು, ಸಂದಿಗ್ಧಗಳು ಹಾಗೇ ಇರಬೇಕು ಎನ್ನುವ ನಂಬಿಕೆ ಅವರದಾಗಿದೆ. ವೈಯಕ್ತಿಕ ಅನುಭವಗಳಿಂದ